**All India Radio: Bangalore**
**National Bulletin In Kannada**

**ಆಕಾಶವಾಣಿ, ಬೆಂಗಳೂರು**

**ರಾಷ್ಟ್ರೀಯ ವಾರ್ತೆಗಳು**

**01.05.2026 19.35 p.m.**

**********

ಮುಖ್ಯಾಂಶಗಳು

೧. ಲೇಹ್‌ನಲ್ಲಿ ಭಗವಾನ್ ಬುದ್ಧನ ಪವಿತ್ರ ಅವಶೇಷಗಳ ಪ್ರದರ್ಶನ ಉದ್ಘಾಟಿಸಿದ ಕೇಂದ್ರ ಗೃಹ ಸಚಿವ ಅಮಿತ್ ಶಾ

೨.ಪೌರತ್ವ ತಿದ್ದುಪಡಿ ನಿಯಮಗಳು-೨೦೨೬ ಅಧಿಸೂಚಿಸಿದ ಕೇಂದ್ರ ಸರ್ಕಾರ; ಪರಿಷ್ಕೃತ ನಿಬಂಧನೆಗಳು ಜಾರಿ

೩.ಆಫ್ರಿಕಾ ಒಕ್ಕೂಟದ ನಿಯೋಗದೊಂದಿಗೆ ವಿದೇಶಾಂಗ ಖಾತೆ ರಾಜ್ಯ ಸಚಿವ ಕೀರ್ತಿವರ್ಧನ್ ಸಿಂಗ್ ಫಲಪ್ರದ ಮಾತುಕತೆ

೪. ಇಪ್ಪತ್ತೊಂಬತ್ತು ಕಿಲೋಮೀಟರ್ ದೂರದ ಪಾಲ್ಕ್ ಜಲಸಂಧಿ ದಾಟಿದ ಜಾರ್ಖಂಡ್‌ನ ೭ ವರ್ಷದ ಇಶಾಂಕ್ ಸಿಂಗ್

೫. ಥಾಮಸ್ ಕಪ್ ಬ್ಯಾಡ್ಮಿಂಟನ್; ಚೀನಾ ತೈಪೆ ಮಣಿಸಿ ಸೆಮಿಫೈನಲ್‌ಗೇರಿದ ಭಾರತ

*************

ಬುದ್ಧ ಪೂರ್ಣಿಮೆಯ ಪವಿತ್ರ ಸಂದರ್ಭದಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಇಂದು ಲೇಹ್‌ನ ಜೀವತ್ಸಲ್‌ನಲ್ಲಿ ತಥಾಗತ ಬುದ್ಧನ ಪವಿತ್ರ ಅವಶೇಷಗಳ ಪ್ರದರ್ಶನವನ್ನು ಉದ್ಘಾಟಿಸಿದರು. ಲಡಾಖ್ ಜನತೆಗೆ ಬುದ್ಧ ಪೂರ್ಣಿಮೆಯ ಶುಭಾಶಯ ಕೋರಿದ ಅವರು, ಸುಮಾರು ೭೫ ವರ್ಷಗಳ ನಂತರ ಈ ಪವಿತ್ರ ಅವಶೇಷಗಳು ಲಡಾಖ್‌ಗೆ ಬಂದಿವೆ ಎಂದು ಹರ್ಷ ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಗೃಹ ಸಚಿವರು, ಭಗವಾನ್ ಬುದ್ಧನ ಜ್ಞಾನವು ೨ ಸಾವಿರದ ೫೦೦ ವರ್ಷಗಳ ನಂತರವೂ ಇಂದಿನ ಕಾಲಕ್ಕೆ ಅತ್ಯಂತ ಪ್ರಸ್ತುತವಾಗಿದೆ. ಇದು ಕೇವಲ ಧಾರ್ಮಿಕ ಕಾರ್ಯಕ್ರಮವಲ್ಲ, ಇದೊಂದು ಐತಿಹಾಸಿಕ ಪುನರ್ಮಿಲನ ಎಂದು ಬಣ್ಣಿಸಿದ ಅವರು, ಲಡಾಖ್ ಮತ್ತು ಕಾರ್ಗಿಲ್‌ನ ಬೌದ್ಧ ಅನುಯಾಯಿಗಳು ಮಾತ್ರವಲ್ಲದೆ ಇತರ ಧರ್ಮಗಳ ಅನುಯಾಯಿಗಳೂ ಈ ಪವಿತ್ರ ಅವಶೇಷಗಳಿಂದ ನವಚೈತನ್ಯ ಪಡೆಯಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

*************

ಕೇಂದ್ರ ಸರ್ಕಾರವು ಪೌರತ್ವ ತಿದ್ದುಪಡಿ ನಿಯಮಗಳು, ೨೦೨೬ ಅನ್ನು ಅಧಿಸೂಚಿಸಿದ್ದು, ಭಾರತೀಯ ಸಾಗರೋತ್ತರ ಪೌರತ್ವ - ಒಸಿಐ ಕಾರ್ಡ್‌ದಾರರು ಮತ್ತು ಪೌರತ್ವ ಅರ್ಜಿಗಳಿಗೆ ಸಂಬಂಧಿಸಿದಂತೆ ಪರಿಷ್ಕೃತ ನಿಬಂಧನೆಗಳನ್ನು ಪರಿಚಯಿಸಿದೆ. ಕೇಂದ್ರ ಗೃಹ ಸಚಿವಾಲಯವು ೨೦೦೯ರ ಪೌರತ್ವ ನಿಯಮಗಳಿಗೆ ಈ ಬದಲಾವಣೆಗಳನ್ನು ಮಾಡಿದ್ದು, ಗೆಜೆಟ್ ಅಧಿಸೂಚನೆಯ ಮೂಲಕ ಇದನ್ನು ಹೊರಡಿಸಿದೆ. ನೂತನ ನಿಯಮಗಳ ಪ್ರಕಾರ, ಅಪ್ರಾಪ್ತ ಮಗುವೊಂದು ಯಾವುದೇ ಹಂತದಲ್ಲಿ ಭಾರತೀಯ ಪಾಸ್‌ಪೋರ್ಟ್‌ನೊಂದಿಗೆ ಬೇರೆ ಯಾವುದೇ ದೇಶದ ಪಾಸ್‌ಪೋರ್ಟ್ ಅನ್ನು ಹೊಂದುವಂತಿಲ್ಲ. ಒಸಿಐ ಕಾರ್ಡ್ ನೋಂದಣಿ ಮತ್ತು ಅದರ ರದ್ದತಿಗೆ ಸಂಬಂಧಿಸಿದ ಎಲ್ಲಾ ಅರ್ಜಿಗಳನ್ನು ಇನ್ನುಮುಂದೆ ಅಧಿಕೃತ ಪೋರ್ಟಲ್ ಮೂಲಕ ಎಲೆಕ್ಟ್ರಾನಿಕ್ ರೂಪದಲ್ಲೇ ಸಲ್ಲಿಸಬೇಕಾಗುತ್ತದೆ. ಒಸಿಐ ಕಾರ್ಡ್ ಪಡೆಯಲು ಇಚ್ಛಿಸುವವರು ನಿಗದಿತ ಅರ್ಜಿಯನ್ನು ಆನ್‌ಲೈನ್ ಪೋರ್ಟಲ್‌ನಲ್ಲಿ ಭರ್ತಿ ಮಾಡಬೇಕೆಂದು ಸಚಿವಾಲಯ ತಿಳಿಸಿದೆ.

*************

ಕೇಂದ್ರ ವಿದೇಶಾಂಗ ವ್ಯವಹಾರಗಳ ಖಾತೆ ರಾಜ್ಯ ಸಚಿವ ಕೀರ್ತಿವರ್ಧನ್ ಸಿಂಗ್ ಇಂದು ಆಫ್ರಿಕಾ ಒಕ್ಕೂಟದ ಆಯೋಗದ ನಿಯೋಗವನ್ನು ಭೇಟಿ ಮಾಡಿದರು. ಬುರುಂಡಿ ರಾಯಭಾರಿ ಹಾಗೂ ಆಫ್ರಿಕಾ ಒಕ್ಕೂಟದ ಖಾಯಂ ಪ್ರತಿನಿಧಿ ಸಮಿತಿಯ ಅಧ್ಯಕ್ಷ ವಿಲ್ಲಿ ನ್ಯಾಮಿತ್ವೆ ಈ ನಿಯೋಗದ ನೇತೃತ್ವ ವಹಿಸಿದ್ದರು. ಸಾಮಾಜಿಕ ಮಾಧ್ಯಮದಲ್ಲಿ ಮಾಹಿತಿ ಹಂಚಿಕೊಂಡಿರುವ ಸಚಿವ ಕೀರ್ತಿವರ್ಧನ್ ಸಿಂಗ್, ಉಭಯ ರಾಷ್ಟ್ರಗಳ ನಡುವಿನ ಬಹುಮುಖಿ ಸಂಬಂಧಗಳು ಹಾಗೂ ಮುಂಬರುವ ೪ನೇ ಭಾರತ - ಆಫ್ರಿಕಾ ವೇದಿಕೆಯ ಶೃಂಗಸಭೆಯ ಸಿದ್ಧತೆಗಳ ಬಗ್ಗೆ ಫಲಪ್ರದ ಚರ್ಚೆ ನಡೆಸಲಾಗಿದೆ ಎಂದು ತಿಳಿಸಿದ್ದಾರೆ.

*************

ಭಾರತ ಮತ್ತು ಯುನೈಟೆಡ್ ಅರಬ್ ಎಮಿರೇಟ್ಸ್ - ಯುಎಇ ನಡುವಿನ ಸಮಗ್ರ ಆರ್ಥಿಕ ಪಾಲುದಾರಿಕೆ ಒಪ್ಪಂದವು ಉಭಯ ದೇಶಗಳ ನಡುವಿನ ವ್ಯಾಪಾರ ವಿಸ್ತರಣೆಗೆ ವೇಗ ನೀಡುತ್ತಿದ್ದು, ಭಾರತೀಯ ಉದ್ಯಮಗಳಿಗೆ ಹೊಸ ಮಾರುಕಟ್ಟೆಗಳನ್ನು ಮುಕ್ತಗೊಳಿಸುತ್ತಿದೆ ಎಂದು ಕೇಂದ್ರ ಸಚಿವ ಪಿಯೂಷ್ ಗೋಯಲ್ ತಿಳಿಸಿದ್ದಾರೆ. ಈ ಒಪ್ಪಂದವು ಜಾರಿಗೆ ಬಂದು ನಾಲ್ಕು ವರ್ಷಗಳು ಪೂರೈಸಿರುವ ಹಿನ್ನೆಲೆಯಲ್ಲಿ ಸಾಮಾಜಿಕ ಜಾಲತಾಣದಲ್ಲಿ ಮಾಹಿತಿ ಹಂಚಿಕೊಂಡಿರುವ ಅವರು, ಇದು ಭಾರತೀಯ ರೈತರು, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳು ಹಾಗೂ ಇತರ ಉದ್ಯಮಗಳಿಗೆ ಪರಿವರ್ತನಕಾರಿ ಅವಕಾಶಗಳನ್ನು ಸೃಷ್ಟಿಸಿದೆ ಎಂದು ಬಣ್ಣಿಸಿದ್ದಾರೆ. ಇದೇ ವೇಳೆ, ಬ್ರಿಟನ್‌ನ ವ್ಯಾಪಾರ ಮತ್ತು ವ್ಯವಹಾರಗಳ ಕಾರ್ಯದರ್ಶಿ ಪೀಟರ್ ಕೈಲ್ ಅವರೊಂದಿಗೆ ವರ್ಚುವಲ್ ಸಭೆ

ನಡೆಸಿರುವ ಸಚಿವ ಪಿಯೂಷ್ ಗೋಯಲ್, ಭಾರತ-ಬ್ರಿಟನ್ ನಡುವಿನ ವ್ಯಾಪಾರ ಸಂಬಂಧಗಳನ್ನು ವೃದ್ಧಿಸುವ ಕುರಿತು ಚರ್ಚಿಸಿರುವುದಾಗಿ ತಿಳಿಸಿದ್ದಾರೆ.

*************

ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಜೆ.ಪಿ. ನಡ್ಡಾ ಅವರು ಇಂದು ಮೊಹಾಲಿಯಲ್ಲಿರುವ ರಾಷ್ಟ್ರೀಯ ಔಷಧೀಯ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆಗೆ ಭೇಟಿ ನೀಡಿ, ಅಲ್ಲಿನ ಅತ್ಯಾಧುನಿಕ ಸಂಶೋಧನಾ ಸೌಲಭ್ಯಗಳನ್ನು ಪರಿಶೀಲಿಸಿದರು. ಔಷಧೀಯ ಶಿಕ್ಷಣವನ್ನು ಬಲಪಡಿಸುವ, ನಾವೀನ್ಯತೆಯನ್ನು ಉತ್ತೇಜಿಸುವ ಮತ್ತು ಬಯೋಫಾರ್ಮಾಸ್ಯುಟಿಕಲ್ ಕ್ಷೇತ್ರದಲ್ಲಿ ಸಂಶೋಧನೆ ಹಾಗೂ ಅಭಿವೃದ್ಧಿಯನ್ನು ಉತ್ತೇಜಿಸುವ ಕೇಂದ್ರ ಸರ್ಕಾರದ ಬದ್ಧತೆಯನ್ನು ಈ ಭೇಟಿಯು ಪುನರುಚ್ಚರಿಸಿದೆ. ಈ ಸಂದರ್ಭದಲ್ಲಿ ಅವರು ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದರು.

*************

ಪಶ್ಚಿಮ ಬಂಗಾಳದ ೧೫ ಮತಗಟ್ಟೆಗಳಲ್ಲಿ ಮರುಮತದಾನ ನಡೆಸುವಂತೆ ಚುನಾವಣಾ ಆಯೋಗ ಇಂದು ಆದೇಶಿಸಿದೆ. ಮಾಗ್ರಾಹತ್ ಪಶ್ಚಿಮ ವಿಧಾನಸಭಾ ಕ್ಷೇತ್ರದ ೧೧ ಹಾಗೂ ಡೈಮಂಡ್ ಹಾರ್ಬರ್ ಕ್ಷೇತ್ರದ ೪ ಮತಗಟ್ಟೆಗಳಲ್ಲಿ ನಾಳೆ ಬೆಳಿಗ್ಗೆ ೭ರಿಂದ ಸಂಜೆ ೬ರವರೆಗೆ ಮತದಾನ ನಡೆಯಲಿದೆ. ಕಳೆದ ಬುಧವಾರ ನಡೆದ ಎರಡನೇ ಹಂತದ ಮತದಾನದ ಕುರಿತು ಚುನಾವಣಾಧಿಕಾರಿಗಳು ಮತ್ತು ವೀಕ್ಷಕರು ನೀಡಿದ ವರದಿಯನ್ವಯ, ಈ ಹಿಂದಿನ ಮತದಾನವನ್ನು ಅಸಿಂಧು ಎಂದು ಘೋಷಿಸಿ ಆಯೋಗ ಈ ಕ್ರಮ ಕೈಗೊಂಡಿದೆ. ಈ ಕುರಿತು ರಾಜ್ಯ ಮುಖ್ಯ ಚುನಾವಣಾಧಿಕಾರಿಗಳಿಗೆ ಪತ್ರ ಬರೆದು ಸೂಚನೆ ನೀಡಲಾಗಿದೆ.

*************

ಪ್ರಾಜೆಕ್ಟ್ ೧೭ಎ ಅಡಿಯಲ್ಲಿ ನಿರ್ಮಿಸಲಾದ ಆರನೇ ಅತ್ಯಾಧುನಿಕ ಯುದ್ಧನೌಕೆ 'ಮಹೇಂದ್ರಗಿರಿ'ಯನ್ನು ಇಂದು ಮುಂಬೈನಲ್ಲಿ ಭಾರತೀಯ ನೌಕಾಪಡೆಗೆ ಹಸ್ತಾಂತರಿಸಲಾಯಿತು. ಸ್ವದೇಶಿ ವಿನ್ಯಾಸ ಮತ್ತು ರಹಸ್ಯ ಕಾರ್ಯಾಚರಣೆಯ ತಂತ್ರಜ್ಞಾನ ಹೊಂದಿರುವ ಈ ನೌಕೆಯು ರಕ್ಷಣಾ ವಲಯದ 'ಆತ್ಮನಿರ್ಭರತೆ'ಗೆ ಉತ್ತಮ ಸಾಕ್ಷಿಯಾಗಿದೆ ಎಂದು ರಕ್ಷಣಾ ಸಚಿವಾಲಯ ತಿಳಿಸಿದೆ.

*************

ಮಧ್ಯಪ್ರದೇಶದ ಜಬಲಪುರ ಸಮೀಪದ ಬರ್ಗಿ ನದಿಯಲ್ಲಿ ಸಂಭವಿಸಿದ ಪ್ರವಾಸಿ ದೋಣಿ ದುರಂತದಲ್ಲಿ ಮೃತಪಟ್ಟವರ ಸಂಖ್ಯೆ ೯ಕ್ಕೆ ಏರಿಕೆಯಾಗಿದೆ. ನಿನ್ನೆ ಸಂಜೆ ಖಾಮರಿಯಾ ದ್ವೀಪದ ಬಳಿ ೩೯ ಪ್ರಯಾಣಿಕರಿದ್ದ ದೋಣಿಯು ಭೀಕರ ಚಂಡಮಾರುತ ಮತ್ತು ಅಲೆಗಳ ರಭಸಕ್ಕೆ ಸಿಲುಕಿ ಮುಳುಗಡೆಯಾಗಿತ್ತು. ಈ ವರೆಗೆ ೨೮ ಮಂದಿಯನ್ನು ಯಶಸ್ವಿಯಾಗಿ ರಕ್ಷಿಸಲಾಗಿದ್ದು, ನಾಪತ್ತೆಯಾಗಿರುವ ನಾಲ್ಕು ಪ್ರವಾಸಿಗರಿಗಾಗಿ ಶೋಧ ಕಾರ್ಯ ಮುಂದುವರೆದಿದೆ. ಘಟನೆ ಕುರಿತು ಪ್ರಧಾನಿ ನರೇಂದ್ರ ಮೋದಿ ತೀವ್ರ ಸಂತಾಪ ವ್ಯಕ್ತಪಡಿಸಿದ್ದು, ಮೃತರ ಕುಟುಂಬಗಳಿಗೆ ಪ್ರಧಾನಿಮಂತ್ರಿ ರಾಷ್ಟ್ರೀಯ ಪರಿಹಾರ ನಿಧಿಯಿಂದ ತಲಾ ೨ ಲಕ್ಷ ರೂಪಾಯಿ ಹಾಗೂ ಗಾಯಾಳುಗಳಿಗೆ ೫೦ ಸಾವಿರ ರೂಪಾಯಿ ಪರಿಹಾರ ಘೋಷಿಸಿದ್ದಾರೆ ಹಾಗೂ ಗಾಯಾಳುಗಳ ಶೀಘ್ರ ಚೇತರಿಕೆಗೆ ಪ್ರಾರ್ಥಿಸಿದ್ದಾರೆ. ರಕ್ಷಣಾ ಸಚಿವ ರಾಜನಾಥ್ ಸಿಂಗ್ ಕೂಡ ದೋಣಿ ದುರಂತದಲ್ಲಿ ಪ್ರಾಣಹಾನಿ ಆಗಿರುವ ಕುರಿತು ದು:ಖ ವ್ಯಕ್ತಪಡಿಸಿದ್ದು, ಮೃತಪಟ್ಟವರ ಕುಟುಂಬಗಳಿಗೆ ಸಂತಾಪ ಸೂಚಿಸಿ, ಗಾಯಗೊಂಡವರ ಶೀಘ್ರ ಚೇತರಿಕೆಗೆ ಪ್ರಾರ್ಥಿಸಿದ್ದಾರೆ.

*************

ಮಾಹಿತಿ ಮತ್ತು ಪ್ರಸಾರ ಸಚಿವಾಲಯದ ಕಾರ್ಯದರ್ಶಿ ಚಂಚಲ್ ಕುಮಾರ್ ಅವರ ಅಧ್ಯಕ್ಷತೆಯಲ್ಲಿ ಇಂದು ನವದೆಹಲಿಯಲ್ಲಿ ನೇರ ಕಾರ್ಯಕ್ರಮ ಅಭಿವೃದ್ಧಿ ಕೋಶ - ಎಲ್ಇಡಿಸಿಯ ೪ನೇ ಸಭೆ ನಡೆಯಿತು. ಈ ಸಭೆಯಲ್ಲಿ ೯ ಕೇಂದ್ರ ಸಚಿವಾಲಯಗಳು, ೬ ರಾಜ್ಯಗಳು ಮತ್ತು ೧೨ ಉದ್ಯಮ ಪ್ರತಿನಿಧಿಗಳು ಪಾಲ್ಗೊಂಡಿದ್ದರು. ಭಾರತದ ಲೈವ್ ಇವೆಂಟ್ಸ್ ಉದ್ಯಮದ ಬೆಳವಣಿಗೆಗೆ ಪೂರಕವಾದ ಸಮನ್ವಯ ಮಾರ್ಗಸೂಚಿಯನ್ನು ಸಿದ್ಧಪಡಿಸುವಲ್ಲಿ ಐಇಆಅ ಪ್ರಮುಖ ಪಾತ್ರ ವಹಿಸಲಿದೆ ಎಂದು ಕಾರ್ಯದರ್ಶಿಯವರು ತಿಳಿಸಿದರು. ಲೈವ್ ಇವೆಂಟ್ಸ್ ಕ್ಷೇತ್ರವು ಉದ್ಯೋಗ ಸೃಷ್ಟಿ, ಪ್ರವಾಸೋದ್ಯಮ ಮತ್ತು ಆರ್ಥಿಕತೆಗೆ ಗಣನೀಯ ಕೊಡುಗೆ ನೀಡುತ್ತಿದ್ದು, ಈ ಕಾರ್ಯಕ್ರಮಗಳ ಆಯೋಜನೆಗೆ ಅಗತ್ಯವಿರುವ ಪ್ರಕ್ರಿಯೆಗಳನ್ನು ಪಾರದರ್ಶಕಗೊಳಿಸಲು ಎಲ್ಲ ಸೌಲಭ್ಯಗಳನ್ನು ಒದಗಿಸಲಾಗುವುದು ಎಂದು ಅವರು ಭರವಸೆ ನೀಡಿದರು.

*************

ಭಾರತ ಮತ್ತು ಟಾಂಜನಿಯಾ ನಡುವಿನ ದ್ವಿಪಕ್ಷೀಯ ವ್ಯಾಪಾರ ಹಾಗೂ ಹೂಡಿಕೆಯನ್ನು ಬಲಪಡಿಸುವ ಉದ್ದೇಶದ ಜಂಟಿ ವ್ಯಾಪಾರ ಸಮಿತಿಯ ೫ನೇ ಅಧಿವೇಶನವು ಇಂದು ಟಾಂಜನಿಯಾದಲ್ಲಿ ಮುಕ್ತಾಯಗೊಂಡಿತು. ಉಭಯ ದೇಶಗಳ ನಡುವಿನ ವ್ಯಾಪಾರವು ೨೦೨೪-೨೫ರಲ್ಲಿ ಇದ್ದ ೮ ಶತಕೋಟಿ ಡಾಲರ್‌ನಿಂದ ೨೦೨೫-೨೬ರ ವೇಳೆಗೆ ೯ ಶತಕೋಟಿ ಡಾಲರ್‌ಗೆ ಏರಿಕೆಯಾಗಿದೆ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ ತಿಳಿಸಿದೆ.

*************

೧೯೯೦ರ ಬ್ಯಾಚ್‌ನ ಭಾರತೀಯ ರಕ್ಷಣಾ ಖಾತೆಗಳ ಸೇವೆಯ ಅಧಿಕಾರಿ ವಿಶ್ವಜಿತ್ ಸಹಾಯ್ ಇಂದು ರಕ್ಷಣಾ ಸಚಿವಾಲಯದಲ್ಲಿ ಹಣಕಾಸು ಕಾರ್ಯದರ್ಶಿಯಾಗಿ ಅಧಿಕಾರ ಸ್ವೀಕರಿಸಿದರು. ಈ ನೇಮಕಾತಿಗೂ ಮುನ್ನ ಅವರು ರಕ್ಷಣಾ ಲೆಕ್ಕಪತ್ರಗಳ ಮಹಾನಿಯಂತ್ರಕರಾಗಿ ಸೇವೆ ಸಲ್ಲಿಸುತ್ತಿದ್ದರು.

*************

ಜಾರ್ಖಂಡ್‌ನ ಏಳು ವರ್ಷದ ಬಾಲಕ ಇಶಾಂಕ್ ಸಿಂಗ್ ಶ್ರೀಲಂಕಾ ಮತ್ತು ಭಾರತದ ನಡುವಿನ ೨೯ ಕಿಲೋಮೀಟರ್ ದೂರದ ಪಾಲ್ಕ್ ಜಲಸಂಧಿಯನ್ನು ಈಜಿ ದಾಖಲೆ ನಿರ್ಮಿಸಿದ್ದಾನೆ. ರಾಂಚಿಯ ಈ ಬಾಲಕ ಶ್ರೀಲಂಕಾದ ತಲೈಮನ್ನಾರ್‌ನಿಂದ ಧನುಷ್ಕೋಟಿಯವರೆಗೆ ೯ ಗಂಟೆ ೫೦ ನಿಮಿಷಗಳಲ್ಲಿ ಕ್ರಮಿಸುವ ಮೂಲಕ ಈ ಸಾಧನೆ ಮಾಡಿದ ಅತಿ ಕಿರಿಯ ಈಜುಗಾರ ಎಂಬ ಹೆಗ್ಗಳಿಕೆಗೆ ಪಾತ್ರನಾಗಿದ್ದಾನೆ. 'ಯುನಿವರ್ಸಲ್ ರೆಕಾರ್ಡ್ಸ್ ಫೋರಂ' ಈತನ ಸಾಧನೆಯನ್ನು ಅಧಿಕೃತವಾಗಿ ಗುರುತಿಸಿದೆ.

*************

ಡೆನ್ಮಾರ್ಕ್‌ನ ಹಾರ್ಸೆನ್ಸ್‌ನಲ್ಲಿ ಇಂದು ನಡೆದ ಥಾಮಸ್ ಕಪ್ ಬ್ಯಾಡ್ಮಿಂಟನ್ ಪಂದ್ಯಾವಳಿಯ ಕ್ವಾರ್ಟರ್‌ಫೈನಲ್‌ನಲ್ಲಿ ಭಾರತದ ಪುರುಷರ ತಂಡವು ಚೀನಾ ತೈಪೆ ವಿರುದ್ಧ ೩-೦ ಅಂತರದ ಭರ್ಜರಿ ಜಯ ಸಾಧಿಸುವ ಮೂಲಕ ಸೆಮಿಫೈನಲ್ ಪ್ರವೇಶಿಸಿದೆ. ಆರಂಭಿಕ ಪಂದ್ಯದಲ್ಲಿ ಲಕ್ಷ್ಯ ಸೇನ್, ವಿಶ್ವದ ೬ನೇ ಶ್ರೇಯಾಂಕಿತ ಆಟಗಾರ ಚೌಟಿಯೆನ್ ಚೆನ್ ವಿರುದ್ಧ ೧೮-೨೧, ೨೨-೨೦, ೨೧-೧೭ ಸೆಟ್‌ಗಳಿಂದ ರೋಚಕ ಜಯ ದಾಖಲಿಸಿ ಭಾರತಕ್ಕೆ ಶುಭಾರಂಭ ನೀಡಿದರು. ನಂತರ ನಡೆದ ಪುರುಷರ ಡಬಲ್ಸ್ ಪಂದ್ಯದಲ್ಲಿ ಸಾತ್ವಿಕ್ ಸಾಯಿರಾಜ್ ರಂಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಜೋಡಿ, ಚಿಯು ಸಿಯಾಂಗ್ ಚೆಹ್ ಮತ್ತು ವಾಂಗ್ ಚಿ-ಲಿನ್ ವಿರುದ್ಧ ೨೩-೨೧, ೧೯-೨೧, ೨೧-೧೨ ಅಂತರದಲ್ಲಿ ಜಯ ಸಾಧಿಸಿ ಭಾರತಕ್ಕೆ ೨-೦ ಅಂತರದ ಮುನ್ನಡೆ ತಂದು ಕೊಟ್ಟಿತು. ಅಂತಿಮವಾಗಿ ಆಯುಷ್ ಶೆಟ್ಟಿ, ಲಿನ್ ಚುನ್-ಯಿ ಅವರನ್ನು ಸೋಲಿಸುವ ಮೂಲಕ ಭಾರತದ ಗೆಲುವನ್ನು ಖಚಿತಪಡಿಸಿದರು.

******ಮುಕ್ತಾಯ*******